ಇಟ್ಟಿಗೆ ಭಟ್ಟಿಯ ಯುವರಾಜನನ್ನು ಒಮ್ಮೆ ಸೂಕ್ಷ್ಮವಾಗಿ ಗಮನಿಸಿದೆ. ಎಷ್ಟೆಂದರೂ ತನ್ನ ತಂದೆಯ ಶ್ರೀಮಂತಿಕೆಯ ಕಾರಣದಿಂದಾಗಿ ಒಂದು ಸುಂದರ ಗುಲಾಬಿ ಹೂವಿಗೆ ಮಾಲೀಕನಾದವನಲ್ಲವೇ!? ಉಡುಗೆ ತೊಡುಗೆಯ ದೃಷ್ಟಿಯಿಂದ ಈತ ಯಾವುದೋ ದೊಡ್ಡ ಅಧಿಕಾರಿಯಂತೆ ಕಾಣುತ್ತಿದ್ದ. ಆತನು ಸೂಟನ್ನು ಅದೆಷ್ಟು ಅಂದವಾಗಿ ಧರಿಸಿದ್ದನೆಂದರೆ, ಧರಿಸಿದ ಅನಂತರವೇ ಅದರ ಮೇಲೆ ಇಸ್ತ್ರಿ ಮಾಡಿದಂತಿತ್ತು; ಕೋಟನ್ನು ಹ್ಯಾಂಗರ್ ಸಮೇತವೇ ಧರಿಸಿದಂತೆ ಭಾಸವಾಗುತ್ತಿತ್ತು. ಮೇ ತಿಂಗಳಿನ ಸುಡುಬೇಸಿಗೆಯ ದಿನದಲ್ಲಿಯೂ ಡೆಕ್ರಾನ್ ಸೂಟ್ ಮತ್ತು ಟೆರಲಿನ್ ಟೈ ಧರಿಸಿ ಆತ ಗೊಂಬೆಯಂತೆ ಕುಳಿತುಕೊಂಡಿದ್ದ. ಆತ ಧರಿಸಿದ್ದ ಬಟ್ಟೆಯನ್ನು ನೋಡಿಯೇ ನನ್ನ ಮುಖದ ಮೇಲೆ ಬೆವರು ಹರಿಯತೊಡಗಿತ್ತು. ನಾನು ಕೂಡಲೇ ಮೇಲಂಗಿಯ ಗುಂಡಿಯನ್ನು ಬಿಚ್ಚುತ್ತ, ಅವ್ವ ನೀಡಿದ ನಿಂಬು ಪಾನಕವನ್ನು ಒಂದೇ ಗುಟುಕಿಗೆ ಖಾಲಿ ಮಾಡಿದೆ.

ಕಾವ್ಯಾ ಮತ್ತು ಆಕೆಯ ಪತಿರಾಯನ ಮುಂದಿದ್ದ ಟೀಪಾಯ್ ಮೇಲೆ ಅವ್ವ ರಸಗುಲ್ಲ, ರಸಮಲಾಯ್, ಧಾರವಾಡ ಪೇಡಾ, ಆಲೂ ಚಿಪ್ಸ್, ಆಗಷ್ಟೇ ಫ್ರಿಡ್ಜ್‌ನಿಂದ ಹೊರತೆಗೆದಿದ್ದ ನಿಂಬೂ ಶರಬತ್, ಮಿರ್ಚಿ ಭಜ್ಜಿ ಮುಂತಾದವನ್ನು ಅಂದವಾಗಿ ಜೋಡಿಸಿದ್ದಳು. ಆದರೆ, ಇಟ್ಟಿಗೆ ಭಟ್ಟಿಯ ಯುವರಾಜ ಇದುವರೆಗೂ ಅವುಗಳ ಪೈಕಿ ಯಾವುದೇ ವಸ್ತುವನ್ನೂ ಮುಟ್ಟಿರಲಿಲ್ಲ; ಕೈಯಲ್ಲಿದ್ದ ಚಮಚಾದಿಂದ ಶರಬತ್‌ನ ಗ್ಲಾಸನ್ನು ನಿಧಾನವಾಗಿ ಬಡಿಯುತ್ತಿದ್ದ; ಶ್ರುತಿ ಸರಿಪಡಿಸಿಕೊಳ್ಳುವ ತಬಲಾ ವಾದಕನಂತೆ.

ಅವ್ವನ ಆತಿಥ್ಯವೆಂದರೆ ಇತರರು ಬೊಟ್ಟು ಮಾಡಿ ತೋರಿಸುವ ಪ್ರಶ್ನೆಯೇ ಇಲ್ಲ; ಅಷ್ಟೊಂದು ಅಚ್ಚುಕಟ್ಟು. ಅದೆಷ್ಟೇ ಉರಿಮುಸುಡಿಯ ವ್ಯಕ್ತಿಯಾದರೂ ತನ್ನ ಹಲ್ಲುಗಳ ಪ್ರದರ್ಶನ ಮಾಡಿಯೇ ಮಾಡುತ್ತಾನೆ. ಆದರೆ, ಇಲ್ಲಿ ಇನ್ನೂ ಅಂತಹ ಸನ್ನಿವೇಶ ಕಾಣಿಸಿರಲಿಲ್ಲ. ನಾನು ಆತಿಥ್ಯಕ್ಕೆ ಸಂಬಂಧಿಸಿದಂತೆ ಮಾತನಾಡುವ ಅವಶ್ಯಕತೆ ಇಲ್ಲದೇ ಇದ್ದರೂ, ಒಂದೂ ಮಾತನಾಡದೇ ಇರುವುದೂ ಸಭ್ಯತೆಯ ಲಕ್ಷಣವಲ್ಲ ಎಂದು ಭಾವಿಸಿ ಹೇಳಿದೆ, ''ನೀವು ಮದುವೆಯಾದ ಹೊಸತರಲ್ಲಿ ಸಂಕೋಚ ಪಡುತ್ತಿರಬಹುದು; ಮೊದಲನೇ ಬಾರಿಗೆ ಬಂದಿರುವ ಕಾರಣವೂ ಇರಬಹುದು... ಆದರೆ, ನಮ್ಮ ಮನೆಯಲ್ಲಿ ನೀವು ಮನಬಿಚ್ಚಿ ಮಾತನಾಡಬಹುದು; ಇದು ನಿಮ್ಮದೇ ಮನೆಯೆಂದು ಭಾವಿಸಿ... ದಯವಿಟ್ಟು ತಿಂಡಿ ತೆಗೆದುಕೊಳ್ಳಿ...''

ಆತನ ಮುಖದ ಮೇಲೆ ನಸುನಗೆಯ ಗೆರೆಯೊಂದು ಮೂಡಿ, ಅಷ್ಟೇ ವೇಗದಲ್ಲಿ ಮಾಯವಾಗಿಯೂ ಹೋಯಿತು. ಹೆಂಡತಿಯ ಕಡೆಯ ಸಂಬಂಧಿಕರ ಮನೆಗೆ ಹೋದಾಗ ಮುಖವನ್ನು ಗಂಟುಹಾಕಿಕೊಂಡೇ ಇರಬೇಕು ಎಂದು ನಮ್ಮನೆಗೆ ಹೊರಡುವುದಕ್ಕಿಂತ ಮೊದಲು ಆತನ ಮನೆಯವರು ಎಚ್ಚರಿಕೆ ಕೊಟ್ಟು ಕಳಿಸಿದ್ದಾರೋ ಏನೋ ಎನ್ನುವ ಸಣ್ಣ ಅನುಮಾನ ನನ್ನಲ್ಲಿ ಮೂಡಿತ್ತು.

ಒಂದೆರಡು ಕ್ಷಣಗಳನ್ನು ಬಿಟ್ಟು ಆತನ ತುಟಿಗಳು ಅದುರಿದವು. ''ನಾನು ವಾಸ್ತವದಲ್ಲಿ ತಿನ್ನುವುದು ತುಂಬಾ ಕಡಿಮೆ... ಈಗಷ್ಟೇ ಇವರು (ನನ್ನವ್ವ) ಚಹಾ ಕೊಟ್ಟರಲ್ಲ; ಬೇರೆ ಏನೂ ಬೇಡ ಅನ್ನಿಸ್ತಿದೆ.''

ನಾನು ಅತ್ಯಂತ ಗಂಭೀರವಾಗಿ ಹೇಳಿದೆ, ''ಹೋಗ್ಲಿ ಬಿಡಿ, ಒಂದೆರಡು ಆಲೂ ಚಿಪ್ಸ್ ಆದ್ರೂ ತಗೊಳ್ಳಿ...''

ನಮ್ಮಿಬ್ಬರ ನಡುವಣ ಸಂಭಾಷಣೆ ಗ್ರಾಂಥಿಕ ಭಾಷೆಯಲ್ಲಿಯೇ ನಡೆದಿತ್ತು; ನಾನು ಕನ್ನಡ ಮೇಷ್ಟ್ರು, ಆತ ಬಿಸಿನೆಸ್‌ಮ್ಯಾನ್! ಆತ ಇನ್ನೇನೋ ಹೇಳುವುದರಲ್ಲಿದ್ದ; ಅಷ್ಟರಲ್ಲಿ ಆತನ ನವವಿವಾಹಿತೆ ಪತಿದೇವರ ಪಕ್ಷವನ್ನು ವಹಿಸಿಕೊಂಡು ಉಲಿದಳು, ''ಯಾಕೋ ನಾಲ್ಕಾರು ದಿನಗಳಿಂದ ಇವರ ಆರೋಗ್ಯ ಅಷ್ಟೊಂದು ಚೆನ್ನಾಗಿಲ್ಲ... ಅದಿಕ್ಕೆ...''